





ಹಿಂದೀ ಮೂಲ:
**ಪ್ರೇಮಚಂದ್**
ಕನ್ನಡಕ್ಕೆ:
**ಡಾ. ಆರ್. ಲಕ್ಷ್ಮೀನಾರಾಯಣ**
ಕಲೆ: ವಿಶ್ವನಾಥ್ ಎ.ಎಸ್.

‘ಸಹನಾ ಬಂದಿದ್ದಾನೆ. ಒಳಗಡೆ ಇಟ್ಟಿರೋ ಹಣ ತಗೊಂಡು ಬಾ ಇಲ್ಲಿ. ಅವನಿಗೆ ಕೊಟ್ಟುಬಿಡುತ್ತೀನಿ. ಹ್ಯಾಗೋ ಅತ್ಲಾಗೆ ಕಾಟ ತಪ್ಪಿದರೆ ಸಾಕು’ ಎಂದು ಹಲ್ಕೂ ಹೆಂಡತಿ ಹತ್ತಿರ ಹೇಳಿದ.

ಮುನ್ನಿ ಕಸ ಗುಡಿಸುತ್ತಾ ಇದ್ದವಳು ಹಿಂದಕ್ಕೆ ತಿರುಗಿ, ‘ಇರೋದು ಮೂರೇ ರೂಪಾಯಿ. ಇದನ್ನು ಕೊಟ್ಟುಬಿಟ್ಟರೆ ಕಂಬಳಿ ಎಲ್ಲಿಂದ ಬರುತ್ತೆ? ಪುಷ್ಯಮಾಘಗಳ ರಾತ್ರಿಗಳನ್ನು ಕಾಡಿನಲ್ಲಿ ಕಳೆಯೋದು ಹೇಗೆ? ಬೆಳೆ ಬಂದ ಮೇಲೆ ಹಣ ಕೊಡ್ತೀವಿ. ಈಗಲೇ ಕೊಡಕ್ಕಾಗಲ್ಲ ಅಂತ ಅವನಿಗೆ ಹೇಳಿಬಿಡು’ ಎಂದು ಹೇಳಿದಳು.

ಹಲ್ಕೂ ಸ್ವಲ್ಪ ಹೊತ್ತಿನ ತನಕ ಹಾಗೇ ಸುಮ್ಮನೆ ನಿಂತಿದ್ದ. ಪುಷ್ಯಮಾಸ ಆಗಲೇ ತಲೆ ಮೇಲೆ ಬಂದು ಕೂತಿದೆ. ಕಂಬಳಿ ಇಲ್ಲದೆ ರಾತ್ರಿ ಹೊತ್ತು ಏನೇ ಆದರೂ ಕಾಡಿಗೆ ಹೋಗಕ್ಕಾಗಲ್ಲ. ಆದರೆ, ಸಹನಾ ಒಪ್ಪಲ್ಲ. ಬೆದರಿಕೆ ಹಾಕುತ್ತಾನೆ. ಬಾಯಿಗೆ ಬಂದ ಹಾಗೆ ಬೈತಾನೆ. ಭೂತದಿಂದ ಚಳಿ ಸಾಯುತ್ತೆ. ಭೂತವಂತೂ ತಲೆಯಿಂದ ಹೊರಟು ಹೋಗುತ್ತೆ ಅಂತ ಯೋಚಿಸುತ್ತ ತನ್ನ ಭಾರೀ ಶರೀರ ಹೊತ್ತುಕೊಂಡು (ಅವನ ಹೆಸರಿಗೆ ತದ್ವಿರುದ್ಧವಾದ ದೇಹ) ಹೆಂಡತಿ ಹತ್ತಿರ ಬಂದ. ಅವಳನ್ನು ಪುಸಲಾಯಿಸುತ್ತ, ‘ಹೋಗು ಹೋಗು ತಗೊಂಡು ಬಾ ಇಲ್ಲಿ. ಸದ್ಯ ಪೀಡೆ ತೊಲಗಿದರೆ ಸಾಕು. ಕಂಬಳಿಗೆ ಇನ್ನೇನಾದರೂ ಬೇರೆ ಉಪಾಯ, ಯೋಚನೆ ಮಾಡ್ತೀನಿ.’